ನಿಯಮ ೩೩೪ರ ಅಡಿಯಲ್ಲಿ

(i) ವಿದ್ಯಾರ್ಥಿಗಳಿಗೆ ಬಸ್‌ಪಾಸನ್ನು ನೀಡುವ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯಕ್ಕೆ ನೆರೆ ರಾಜ್ಯಗಳಿಂದ ವಿದ್ಯಾಭ್ಯಾಸಕ್ಕಾಗಿ ಬರುತ್ತಿರುವ ವಿದ್ಯಾರ್ಥಿಗಳಿಗೆ ಕಾನೂನಿನ ಅಡಿಯಲ್ಲಿ ಸಾರಿಗೆ ಸಂಸ್ಥೆಯಿಂದ ಪಾಸು ನೀಡಲಾಗುತ್ತಿಲ್ಲ ಎನ್ನುವಂತಹ ವಿಷಯವು ಸಾರ್ವಜನಿಕರಿಂದ ನನ್ನ ಗಮನಕ್ಕೆ ಬಂದಿದ್ದು, ನಮ್ಮ ರಾಜ್ಯಕ್ಕೆ ರಾಜ್ಯದ ಸಮೀಪವರ್ತಿ ಗ್ರಾಮಗಳಿಂದ ಬರುತ್ತಿರುವ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ಸಿಗದೆ ಇರುವುದರಿಂದ ಅತಿ ತೊಂದರೆಯಾಗುತ್ತಿದ್ದು, ಕರ್ನಾಟಕದಲ್ಲಿಯ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ನಿಯಮಾವಳಿಯ ಪ್ರಕಾರ ನೆರೆ ರಾಜ್ಯಗಳಿಂದ ಬರುತ್ತಿರುವ ವಿದ್ಯಾರ್ಥಿವರ್ಗಕ್ಕೆ ಪಾಸ್ ಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಸಹಾಯವಾಗುವಂತೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಸೂಚನೆಯನ್ನು ನೀಡುತ್ತೇನೆ. ಮಾನ್ಯ ಸಾರಿಗೆ ಮಂತ್ರಿಗಳಿಂದ ಈ ಬಗ್ಗೆ ಹೇಳಿಕೆಯನ್ನು ನೀಡಲು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಮಾನ್ಯ ಅರಣ್ಯ ಖಾತೆ ಸಚಿವರು) — ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು ಮೇಲ್ಮನೆಯಲ್ಲಿದ್ದಾರೆ. ಮಾನ್ಯ ಸದಸ್ಯರ ನೋಟೀಸಿಗೆ ಉತ್ತರ ಕಳುಹಿಸಿಕೊಡುವಂತೆ ಅವರಿಗೆ ತಿಳಿಸುತ್ತೇನೆ.

(iii) ಚಿಕ್ಕನಾಯಕನ ಹಳ್ಳಿಯಲ್ಲಿರುವ ಶ್ರೀ ತೀರ್ಥರಾಮೇಶ್ವರ ದೇವಸ್ಥಾನದ ಪ್ರದೇಶದಿಂದ ಸುಣ್ಣದಕಲ್ಲು ತೆಗೆಯುವುದು.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).— ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಕಂದಿಕೆರೆ ಹೋಬಳಿಯಲ್ಲಿ ತೀರ್ಥರಾಮೇಶ್ವರ ಸ್ವಾಮಿಯವರ ಪುರಾತನ ಪುಣ್ಯ ಕ್ಷೇತ್ರ ಇರುತ್ತದೆ. ಶ್ರೀ ತೀರ್ಥರಾಮೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲೇ ಉದ ವ ಗಂಗೆ ಹರಿಯುತ್ತಿದ್ದು, ಸಾವಿರಾರು ಜನ ಭಕ್ತಾದಿಗಳು ಬಂದು ಪುಣ್ಯ ಸ್ನಾನ ಮಾಡಿ ರಾಮಲಿಂಗೇಶ್ವರ ಸ್ವಾಮಿಯ ದರ್ಶನ ಪಡೆದು ಹೋಗುತ್ತಿರುತ್ತಾರೆ. ಆದರೆ ಈ ಅಂಶವನ್ನು ಕಡೆಗಣಿಸಿ ಗಣಿ ಮತ್ತು ಭೂ ವಿಜ್ಞಾನ ಸಂಸ್ಥೆಯವರು ಸ್ವಾಮಿಯ ಪವಿತ್ರ ದೇವಸ್ಥಾನ ಮತ್ತು ಉದ್ಭವ ಗಂಗೆ ಹರಿಯುವ ಪ್ರದೇಶವನ್ನು ಸೇರಿಸಿ ಅಮ್ಮಸಂದ್ರ ಸಿಮೆಂಟ್ ಸಂಸ್ಥೆಯವರಿಗೆ ಸುಣ್ಣಕಲ್ಲನ್ನು ತೆಗೆದುಕೊಳ್ಳಲು ಪರವಾನಿಗೆ ನೀಡಿರುತ್ತಾರೆ ಸಿಮೆಂಟ್ ಕಂಪೆನಿಯವರು ಕ್ವಾರಿ ಕೆಲಸವನ್ನು ಪ್ರಾರಂಭಿಸಲು ಸುಣ್ಣದಕಲ್ಲಿನ ಬಂಡೆಯನ್ನು ಕೊರೆದು ಸಿಡಿಸುವ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಹೀಗೆ ದೇವಸ್ಥಾನ ಮತ್ತು ಉದ್ಭವ ಗಂಗೆ ಹರಿಯುವುದರ ಪಕ್ಕದಲ್ಲೇ ಬಂಡೆ ಕೊರೆದು ಸಿಡಿಸುವುದರಿಂದ ದೇವಸ್ಥಾನಕ್ಕೆ ಪೆಟ್ಟಾಗಿ ಹಾಳಾಗುವುದರ ಜೊತೆಗೆ ಉದ್ಭವ ಗಂಗೆ ಬತ್ತಿ ಹರಿಯುವುದು ನಿಂತುಹೋಗಿ ಈ ಕ್ಷೇತ್ರದ ಪವಿತ್ರತೆ ಹಾಳಾಗುತ್ತದೆ. ಇದು ರಾಜ್ಯಾಂಗದಲ್ಲಿ ಕೊಟ್ಟಿರುವ ಧರ್ಮಾಚರಣೆಯ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದಂತಾಗಿದೆ. ಭಕ್ತಾದಿಗಳು ಈಗಾಗಲೇ ಈಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರ್ಕಾರದ ಗಮನಕ್ಕೆ ತಂದಿದ್ದರೂ ಸಹ ಪ್ರಯೋಜನ ಆಗಿಲ್ಲ. ಭಕ್ತಾದಿಗಳ ಕೋರಿಕೆ ಮೇರೆಗೆ ತುಮಕೂರು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವಂತೆ ಈ ಕ್ಷೇತ್ರದ ಸುತ್ತ ೪ ಕಿಲೋಮೀಟರ್ ದೂರದ ಪ್ರದೇಶವನ್ನು ನಿಷಿದ್ಧ ಪ್ರದೇಶವೆಂದು ಘೋಷಿಸಿ ಈಗ ನಡೆಯುತ್ತಿರುವ ಕ್ವಾರಿ ಕೆಲಸವನ್ನು ನಿಲ್ಲಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್(ವಿದ್ಯುಚ್ಛಕ್ತಿ, ಗಣಿ ಮತ್ತು ಭೂ ವಿಜ್ಞಾನ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮೊನ್ನೆಯ ದಿವಸ ನನ್ನನ್ನು ಭೇಟಿ ಆಗಿದ್ದರು. ಈ ವಿಚಾರದಲ್ಲಿ ಈಗಾಗಲೇ ನಾವು ತಡೆಯಾಜ್ಞೆ ಯನ್ನು ನೀಡಿದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.— ಮಾನ್ಯ ಅಧ್ಯಕ್ಷರೆ, ಕೇವಲ ತಡೆಯಾಜ್ಞೆಯನ್ನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು.— ಮಾನ್ಯ ಸದಸ್ಯರು ಈ ವಿಷಯವನ್ನು ಸದಸ್ಯರ ಗಮನಕ್ಕೆ ತಂದಿದ್ದಾರೆ. ಮಂತ್ರಿಗಳೂ ಉತ್ತರ ಕೊಡುವುದರ ಜೊತೆಗೆ ತಡೆಯಾಜ್ಞೆಯನ್ನೂ ಕೂಡ ಕೊಟ್ಟಿದ್ದಾರೆ. ಆದರೆ ೩೩೪ರ ನಿಯಮದ ಪ್ರಕಾರ ಇದರಲ್ಲಿ ಚರ್ಚೆಗೆ ಅವಕಾಶ ಇಲ್ಲ,

ಶ್ರೀ ಬಿ. ಲಕ್ಕಪ್ಪ.— ತಡೆಯಾಜ್ಞೆಯನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ಕೆಲಸ ಇನ್ನೂ ನಡೆಯುತ್ತಲೇ ಇದೆ. ಸರ್ಕಾರಿ ಅಧಿಕಾರಿಗಳು ಸಚಿವರ ಮಾತನ್ನು ಕೇಳುವುದಿಲ್ಲ. ಪೋಲೀಸರು ಮ್ಯಾನೇಜ್‌ಮೆಂಟ್‌ನವರ ಜೊತೆ ಸಾಮೀಲಾಗಿದ್ದಾರೆ.

ಅಧ್ಯಕ್ಷರು — ನೀವು ಈ ರೀತಿ ಚರ್ಚೆ ಮಾಡುವುದಾದರೆ ಅದು ಯಾವುದೂ ಸದನದ ಕಾರ್ಯ ಕಲಾಪಗಳ ವರದಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.— ನಿಯಮ ೩೩ಳಿರ ಪ್ರಕಾರ ಸದನದ ಗಮನಕ್ಕೆ ತಂದಿದೆ, ಮಾನ್ಯ ಸಚಿವರ ಗಮನಕ್ಕೂ ತಂದಿದ್ದಾಗಿದೆ, ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ೩೩ಳಿರ ನಿಯಮದ ಪ್ರಕಾರ ೫ವಿಷಯಗಳನ್ನು ಮಾತ್ರ ಒಂದು ದಿವಸಕ್ಕೆ ತೆಗೆದುಕೊಳ್ಳಬೇಕು. ಆದರೆ ನಾವು ೧೦ವಿಷಯಗಳಂತೆ ತೆಗೆದುಕೊಳ್ಳುತ್ತಿದ್ದೇವೆ ಆದರೂ ಮಾನ್ಯ ಸದಸ್ಯರು ಈ ರೀತಿ ಹಠ ಮಾಡುವುದು ಸರಿಯಲ್ಲ.

ಶ್ರೀ ಜಿ. ಎಸ್. ಶಿವಸಂಜಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಆ ಕ್ಷೇತ್ರದ ಒಬ್ಬ ಭಕ್ತ. ನಾನು ಪ್ರತಿವಾರವೂ ಅಲ್ಲಿಗೆ ಹೋಗುತ್ತಿದ್ದೇನೆ. ತುಮಕೂರಿನ ಸುಮಾರು ಅರ್ಧ ಭಾಗ ಜನ ಈ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಈಗ ಏನಾದರೂ ಈ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ಬಂದರೆ ಅಲ್ಲಿಗೆ ಯಾರೂ ಕೂಡ ಹೋಗುವುದಿಲ್ಲ. ನೀವು ತಡೆಯಾಜ್ಞೆಯನ್ನು ಕೊಟ್ಟಿದ್ದೀರಿ. ಆದರೆ ಮಂತ್ರಿಗಳ ಮಾತನ್ನು ಅಧಿಕಾರಿಗಳು ಕೇಳುತ್ತಿಲ್ಲ. ಇವರು ಆದೇಶವನ್ನು ನೀಡಿದ್ದಾರೆ ಆದರೆ ಕೆಲಸವನ್ನು ತಡೆಯುವುದಕ್ಕೆ ಅಸಹಾಯಕರಾಗಿದ್ದಾರೆ. ಮಾನ್ಯ ಸಚಿವರು ತಡೆಯಾಜ್ಞೆಯನ್ನು ನೀಡಿರುವುದಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಈ ದೇವಸ್ಥಾನದ ಸುತ್ತ ೪ ಕಿಲೋಮೀಟರ್‌ವರೆಗೂ ಬಂಡೆಯನ್ನು ಒಡೆಸುವುದಿಲ್ಲವೆಂದು ನಮಗೆ ಭರವಸೆಯನ್ನು ನೀಡಿ ಕೂಡಲೇ ಅಲ್ಲಿ ನಡೆಯುತ್ತಿರುವ ಬಂಡೆ ಒಡೆಯುವ ಕೆಲಸವನ್ನು ನಿಲ್ಲಿಸುವಂತೆ ಆಜ್ಞೆ ಮಾಡಬೇಕು.

ಅಧ್ಯಕ್ಷರು.— ನಿಮ್ಮ ಪರವಾಗಿ ನಾನೂ ಕೂಡ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.— ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಬೇಕು. ಆ ದೇವಸ್ಥಾನದ ಪಾವಿತ್ರ್ಯತೆಗೆ ಧಕ್ಕೆ ಭಾರದಂತೆ ರಕ್ಷಣೆಯನ್ನು ನೀಡಿ ಬಂಡೆ ಒಡೆಯುವ ಕೆಲಸವನ್ನು ಕೂಡಲೇ ನಿಲ್ಲಿಸುವಂತೆ ಆದೇಶ ನೀಡಬೇಕು. ಇಲ್ಲದೇ ಹೋದರೆ ಅಲ್ಲಿನ ಪರಿಸ್ಥಿತಿ ಪ್ರಕ್ಷುಬ್ಧವಾಗುತ್ತದೆಂದು ಹೇಳಬಯಸುತ್ತೇನೆ.

(iii) ಬಾಗಲಕೋಟೆ ತಾಲ್ಲೂಕಿನ ಹಳ್ಳೂರ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯುಂಟಾಗಿರುವುದು.

ಶ್ರೀ ಜೆ. ವಿ. ಮಂಟೂರ (ಬಾಗಲಕೋಟೆ).— ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ತಾಲೂಕಿನ ಹಳ್ಳೂರ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯಿಂದ ಗ್ರಾಮದ ಎಲ್ಲ ೪೦೦೦ ಜನರೂ ಸತ್ಯಾಗ್ರಹಕ್ಕಿಳಿದಿದ್ದು ಮತ್ತು ರಸ್ತಾರೋಖೋಗಳನ್ನು ಶುರುಮಾಡಿ ಮತ್ತು ಅನ್ನಸತ್ಯಾಗ್ರಹಕ್ಕೂ ಕುಳಿತಿದ್ದಾರೆ. ಈ ಬಗ್ಗೆ ತೀವ್ರ—ಕೂಡಲೇ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತೀವ್ರ ಬಗೆಹರಿಸುವ ಬಗ್ಗೆ ಸನ್ಮಾನ್ಯ ಗ್ರಾಮಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).— ೧೯೮೧ರ ಜನಗಣತಿಯ ಪ್ರಕಾರ ಹಳ್ಳೂರ ಗ್ರಾಮದ ಜನಸಂಖ್ಯೆಯು ೨೮೭೦ ಇರುತ್ತೆ. ಇದರ ಪೈಕಿ ಹರಿಜನ ಗಿರಿಜನರ ಸಂಖ್ಯೆ ೬೧೭ ಇರುತ್ತೆ. ಈ ಗ್ರಾಮದಲ್ಲಿ ಎರಡು ನೆಲ ಬಾವಿಗಳಿದ್ದು ಅದರಲ್ಲಿ ಸದ್ಯಕ್ಕೆ ನೀರಿರುವುದಿಲ್ಲ. ಬಾಗಲಕೋಟೆ ತಾಲೂಕು ಹಳ್ಳೂರ ಗ್ರಾಮದಲ್ಲಿ ಜನಾರೋಗ್ಯ ತಾಂತ್ರಿಕ ಇಲಾಖೆಯಿಂದ ಇದುವರೆಗಿನ ೫ ಕೊಳವೆ ಬಾವಿಗಳು ತೆಗೆಯಲಾಗಿದ್ದು ಅವುಗಳ ಪೈಕಿ ೨ಕೊಳವೆ ಬಾವಿಗಳಲ್ಲಿ ನೀರು ದೊರೆತಿಲ್ಲ. ಉಳಿದ ೩ ಕೊಳವೆ ಬಾವಿಗಳಲ್ಲಿ ಕ್ರಮವಾಗಿ ಗಂಟೆಯೊಂದಕ್ಕೆ ೧೮೦೦ ಗ್ಯಾಲನ್ ಮತ್ತು ೩೨೭ ಗ್ಯಾಲನ್‌ಗಳಷ್ಟು ನೀರು ದೊರೆತಿದೆ. ಇವುಗಳ ಪೈಕಿ ೧೮೦೦ ಗ್ಯಾಲನ್‌ಗಳಷ್ಟು ನೀರು ದೊರೆತಿರುವ ಒಂದನೇ ಕೊಳವೆ ಬಾವಿಯು ಹರಿಜನ ಕೇರಿಗೆ ಅತಿ ಸಮೀಪದಲ್ಲಿದ್ದು ಈ ಕೊಳವೆ